ಅಧ್ಯಕ್ಷರು: ಸಚಿವರು ಈಗ ಬರುತ್ತಾರೆ, ಕೃಷ್ಣಾರೆಡ್ಡಿಯವರೆ ಸ್ವಲ್ಪ ಇರಿ, ಉತ್ತರ ಕೊಡಿಸುತ್ತೇನೆ.

ಶ್ರೀ ರವಿ ಸುಬ್ರಹ್ಮಣ್ಯ.

ಆರ್.ಟಿ.ಇ. ಸೀಟುಗಳ ಹಂಚಿಕೆ

107(346); ಶ್ರೀ ರವಿಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ)

ಅ) 2015–16ನೇ ಶೈಕ್ಷಣಿಕ ಸಾಲಿನಲ್ಲಿ ಒಂದನೇ ತರಗತಿಗೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಪಡೆದಿರುವ ಮಕ್ಕಳ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವರ ನೀಡುವುದು)

ಆ) 2015–16ನೇ ಸಾಲಿನಲ್ಲಿ ಶಿಕ್ಷಣದ ಹಕ್ಕಿನ ಆರ್.ಟಿ.ಇ ಅನ್ವಯ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು;

ಇ) ಈ ಪೈಕಿ ಹಂಚಿಕೆ ಮಾಡಲಾದ ಸೀಟುಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಈ) 2015–16ನೇ ಸಾಲಿನಲ್ಲಿ ಶಿಕ್ಷಣದ ಹಕ್ಕಿನ (RTE) ಅಡಿಯಲ್ಲಿ ಶಾಲಾ ಶುಲ್ಕ ಪಾವತಿಸಲು ಬಿಡುಗಡೆಯಾಗಿರುವ ಒಟ್ಟು ಅನುದಾನವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಉ) ಶಿಕ್ಷಣದ ಹಕ್ಕಿನ (RTE) ಅನ್ವಯ ಸರ್ಕಾರದ ವತಿಯಿಂದ ತಲಾವಾರು ಪಾವತಿಯಾಗುತ್ತಿರುವ ಶುಲ್ಕವೆಷ್ಟು? (ಆದೇಶದ ಪ್ರತಿಯನ್ನು ನೀಡುವುದು)?

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 2015–16ನೇ ಶೈಕ್ಷಣಿಕ ಸಾಲಿನಲ್ಲಿ ಒಂದನೇ ತರಗತಿಗೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಪ್ರಕ್ರಿಯೆ ಜೂನ್ ಒಂದರಿಂದ

ಪ್ರಾರಂಭವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಇನ್ನೂ ದಾಖಲಾತಿ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ.

ಆ) 2015–16ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅಡಿ ಆನ್‌ಲೈನ್‌ನಲ್ಲಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ 389552. ಸದರಿ ಅರ್ಜಿಗಳ ಪೈಕಿ 1,31,610 ಅರ್ಜಿಗಳು ಡೂಪ್ಲಿಕೇಟ್ ಅರ್ಜಿಗಳಾಗಿದ್ದು, ಉಳಿದ 2,57,942 ಅರ್ಜಿಗಳನ್ನು ಆನ್–ಲೈನ್ ಪ್ರಕ್ರಿಯೆಗೆ ಪರಿಗಣಿಸಲಾಗಿದೆ.

ಇ) ಜಿಲ್ಲಾವಾರು ಮೂರು ಸುತ್ತುಗಳಲ್ಲಿ ಆನ್‌ಲೈನ್ ಮೂಲಕ ಸೀಟು ಹಂಚಿಕೆ ಮಾಡಲಾಗಿದೆ. ಜಿಲ್ಲಾವಾರು ಮಾಹಿತಿಯ ಪಟ್ಟಿ ಲಗತ್ತಿಸಿದೆ.

ಈ) 2015–16ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯ್ದೆಯಡಿ ಶಾಲಾ ಶುಲ್ಕ ಪಾವತಿಸಲು ಹೆಣ್ಣು ಮಕ್ಕಳ 01ನೇ ತರಗತಿಯ ಹಾಜರಾತಿಗೆ ಪ್ರತಿ ದಿನಕ್ಕೆ ರೂ. 2.00 ಪ್ರೋತ್ಸಾಹ ಧನ ನೀಡುವ ಕಾರ್ಯಕ್ರಮಕ್ಕೆ ಸೇರಿದಂತೆ ಒಟ್ಟಾರೆ ರೂ. 330.00 ಕೋಟಿ ಆಯವ್ಯಯದಲ್ಲಿ ಮೀಸಲಿರಿಸಿದ್ದು, ರೂ. 82.50 ಕೋಟಿಗಳನ್ನು ಆಯುಕ್ತಾಲಯಕ್ಕೆ ಬಿಡುಗಡೆ ಮಾಡಿದೆ. ಈ ಸಾಲಿನ ಪ್ರವೇಶ ಪ್ರಕ್ರಿಯೆ ಕೊನೆಯ ಹಂತ ತಲುಪಿದ್ದು, ಶುಲ್ಕ ಮರುಪಾವತಿ ಸಂಬಂಧ ಜಿಲ್ಲಾ ಉಪನಿರ್ದೇಶಕರುಗಳಿಂದ ಬೇಡಿಕೆ ಪಟ್ಟಿ ಪಡೆದು ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.

ಉ) ಶಿಕ್ಷಣ ಹಕ್ಕು ಕಾಯಿದೆ ಅಡಿ ಪ್ರವೇಶ ಪಡೆದ ಮಕ್ಕಳಿಗೆ ಒಂದನೇ ತರಗತಿ ಮತ್ತು ಮೇಲ್ಪಟ್ಟ ತರಗತಿಗಳಿಗೆ ಗರಿಷ್ಠ ತಲಾ ರೂ. 11898/– ಹಾಗೂ ಪೂರ್ವ ಪ್ರಾಥಮಿಕ ತರಗತಿಗೆ ಗರಿಷ್ಠ ತಲಾ ರೂ. 5924/– ಶುಲ್ಕ ಮರು ಪಾವತಿ ಮಾಡಲು ಅವಕಾಶ ಇದೆ. ಸರ್ಕಾರದ ಆದೇಶದ ಪ್ರತಿ ಲಗತ್ತಿಸಿದೆ.

District wise details of Total RTE seats, No. of Application received, Admitted details

Department of Public Instruction - Karnataka

ಕ್ಷೇ ಸಂಖ್ಯೆ 3460 ಅಪಾಂಇ-(೪) ಶಾಪ್ರ (೪) ದಿನಾಂಕ:26-06-2015ರಲ್ಲಿರುವಂತೆ

Sl.No.	District Name	Total Seats (Q1)	No of Applications received (Q2)	Admitted(Q3)	Admission Details			
					1st Round	2nd round	3rd Round	Total
1	BELGAUM	2854	4958	2365	2091	225	22	2365
2	BAGALKOT	3040	7465	2716	2185	486	27	2716
3	BIJAPUR	4989	9603	4150	3603	468	59	4150
4	GULBARGA	5569	9465	3955	3412	452	51	3955
5	BIDAR	4613	9796	3866	3298	476	51	3866
6	RAICHUR	3613	8186	3069	2751	259	58	3069
7	KOPPAL	2287	5354	2080	1872	155	27	2080
8	GADAG	1490	3931	1342	1073	166	73	1342
9	DHARWAD	2950	8713	2763	2380	317	42	2763
10	UTTARA KANNADA	558	875	489	472	14	1	489
11	HAVERI	2031	4274	1948	1658	267	17	1948
12	BELLARY	5169	13774	4896	4319	454	60	4896
13	CHITRADURGA	2003	5209	1928	1694	210	23	1928
14	DAVANAGERE	3370	8286	3172	2581	507	70	3172
15	SHIMOGA	2266	5263	2080	1754	303	23	2080
16	UDUPI	1069	2627	998	877	116	5	998
17	CHIKKAMANGALORE	1483	2640	1352	1216	107	26	1352
18	TUMKUR	2201	5395	2062	1765	240	57	2062
19	KOLAR	3010	7190	2906	2555	284	48	2906
20	BANGALORE U SOUTH	17299	41486	15154	12283	2009	433	15154
21	BANGALORE RURAL	2459	7280	2388	1997	344	37	2388
22	MANDYA	2431	5491	2331	2083	232	16	2331
23	HASSAN	2364	3878	2096	1823	200	23	2096
24	DAKSHINA KANNADA	2107	3045	1799	1677	110	7	1799
25	KODAGU	658	931	542	500	14	27	542
26	MYSORE	4137	10793	3820	3226	489	84	3820
27	CHAMARAJANAGARA	974	2446	882	778	88	11	882
28	BANGALORE U NORTH	11925	35883	10934	8660	1941	272	10934
29	CHIKKABALLAPURA	2271	5410	2156	1783	356	12	2156
30	BELGAUM CHIKKODI	4338	6330	3788	3465	311	9	3788
31	TUMKUR MADHUGIRI	1179	2774	1149	1039	105	3	1149
32	RAMANAGARA	1759	4668	1681	1442	226	10	1681
33	YADAGIRI	2328	3978	1749	1589	113	28	1749
34	UTTARA KANNADA SIRSI	337	545	302	291	11	0	302
	Grand	111131	257942	98908	84202	12055	1712	98908

ಅನುಬಂಧ–ಉ

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ–IV-A	ಬೆಂಗಳೂರು, ಬುಧವಾರ, ಮೇ ೯, ೨೦೧೨ (ವೈಶಾಖ ೧೧೯, ಶಕ ವರ್ಷ ೧೯೩೪)	ನಂ. ೨೨೮

EDUCATION SECRETARIAT

NOTIFICATION

No.ED 27 MAHITI 2012, Bangalore, dated: 8th May, 2012

1. The Right of Children to Free and Compulsory Educaiton Act 2009, as upheld by the Hon'ble Supreme Court prescribes that at least 25% of the strength of class I in unaided non minority institution be filled with children belonging to disadvantage groups and weaker sections under section 12(1)(C) of the Act. It also provides for reimbursement of per child expenditure under section 12(2) of the Act. The Government of Karnataka

have framed Rules vide Notification No.ED 77YoYoKa 2010, Dated 28.04.2012.

2. The Government is pleased to notify that the upper limit of the per student expenditure to be reimbursed to the unaided institution towards children admitted to Std-I shall be Rs.11,848/- (Rupees Eleven thousand eight hundred forty eight only) per annum per student.

3. Futher, it is also notified that the upper limit of the per student expenditure to be reimbursed to those unaided educational institutions which impart per school education towards the children admitted to pre school class shall be Rs. 5,924/- (Rupees Five thousand nine hundred and twenty four only) per annum per student.

By Order and in the name of Governor of Karnataka,

I.F.Magi

Special Officer and Ex-Officio

Under Secretary to Government

Education Department (Planning)

ಶ್ರೀ ಸಿ.ಟಿ. ರವಿ (ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ, ಬಸವನಗುಡಿರವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ 107(346)ನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರಿಗೆ ಕೇಳಬಯಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ನಮಗೆ online ಎಷ್ಟು ಸ್ಥಾನ, ಸೀಟುಗಳಿವೆಯೋ ಅದಕ್ಕಿಂತ ಕಡಿಮೆ ದಾಖಲಾತಿಯಾಗಿರುವುದಕ್ಕೆ ಕಾರಣವೇನು? ಅರ್ಜಿಗಳು ಜಾಸ್ತಿ ಬಂದಿವೆ. 2,57,942 ಅರ್ಜಿಗಳು ಬಂದಿವೆ. ಅದಕ್ಕಿಂತ ಕಡಿಮೆ ದಾಖಲಾತಿಯಾಗಿರುವುದಕ್ಕೆ ಕಾರಣವೇನು? ಅರ್ಜಿಗಳು ಜಾಸ್ತಿ ಬಂದಿವೆ. ಒಟ್ಟು ಸ್ಥಾನಗಳು ಇರುವುದು 1,11,131 ಸೀಟುಗಳು ಇರುವುದು. ಆದರೆ, 98,908 ಸೀಟುಗಳು ಮಾತ್ರ ಭರ್ತಿಯಾಗುವುದಕ್ಕೆ ಕಾರಣವೇನು? ಯಾಕೆ ಖಾಲಿ ಉಳಿದವು ಎನ್ನುವುದು ಒಂದು ಪ್ರಶ್ನೆ. ಎರಡನೆಯದಾಗಿ, RTE ಮೂಲಕ ಬೇರೆ ಬೇರೆ ಖಾಸಗಿ ವಿದ್ಯಾಸಂಸ್ಥೆಗಳಿಗೆ ಅವಕಾಶ ಕೊಟ್ಟ ನಂತರ ಎಷ್ಟು ಸರ್ಕಾರಿ ಶಾಲೆಗಳು ಮುಚ್ಚಿವೆ? ಮಕ್ಕಳ ಕೊರತೆ ಅನುಭವಿಸುತ್ತಿವೆ. ಈ ಕಾರಣದಿಂದ ಮಕ್ಕಳ ಕೊರತೆಯನ್ನು ಅನುಭವಿಸುತ್ತಿರುವಂಥ ಶಾಲೆಗಳ ಸಂಖ್ಯೆ ಎಷ್ಟು? ಈ ಎರಡು ವಿವರಗಳನ್ನು ಕೊಡಬೇಕು.

ಶ್ರೀ ಕಿಮ್ಮನೆ ರತ್ನಾಕರ: ಸನ್ಮಾನ್ಯ ಸಭಾಧ್ಯಕ್ಷರೆ, ಬಹಳಷ್ಟು ಜನ ಅರ್ಜಿ ಕೊಟ್ಟ ಮೇಲೆ ಕೆಲವರು ಆ ಶಾಲೆಗೆ ಹೋಗಿಲ್ಲ. ಎಲ್ಲಿ ಅವರ ಅಪೇಕ್ಷಿತ ಸೀಟು ಸಿಕ್ಕಿಲ್ಲ ಎನ್ನುವ ಕಾರಣಕ್ಕಾಗಿ ಹೋಗಿಲ್ಲ. ಬಹಳಷ್ಟು ಕಡೆ ನಾವು ಖಾಸಗಿ ಶಾಲೆ ಎಂದು ಪರಿಗಣಿಸಿ ಅದಕ್ಕೆ allotment ಮಾಡಿದ್ದರೂ ಸಹ ಅವರು ಸರ್ಕಾರಿ ಶಾಲೆಯನ್ನೇ ಬಹಳಷ್ಟು ಕಡೆ prefer ಮಾಡಿದ್ದಾರೆ. ಆ ಖಾಸಗಿ ಶಾಲೆಯನ್ನು ಆಯ್ಕೆ ಮಾಡಿಕೊಂಡಿಲ್ಲ. ಒಂದು ಲಕ್ಷ ಸೀಟುಗಳ ಪೈಕಿ ಕೇವಲ 14,000 ಜನ

ಮಾತ್ರ miss ಆಗಿರುವುದು. ಉಳಿದೆಲ್ಲವೂ ಸಹ ಬಂದಿದೆ. ತಾವು ಇನ್ನೊಂದು ಉಪಪ್ರಶ್ನೆಯನ್ನು ಕೇಳಿದ್ದೀರಿ. ಇದರೊಳಗೆ ಮಾಹಿತಿಯಿಲ್ಲ. ಬಹಳ ಪ್ರಮುಖವಾಗಿ ನಾವು ಏನು ಅರ್ಜಿಯನ್ನು ಮಾಡಿದ್ದೇವೆ. ಅವರು ಹೇಳಿರುವುದು admission ಆಗದೆ ಎಷ್ಟು ಶಾಲೆಗಳು ಮುಚ್ಚಿದೆ, ಅದರ ಉಪಪ್ರಶ್ನೆಯನ್ನು ಕೇಳಿಲ್ಲ. ಕೇಳಿದ್ದರೆ ಇದರೊಳಗೆ ನಾನು ಮಾಹಿತಿಯನ್ನು ಒದಗಿಸುತ್ತಿದ್ದೆನು. ಆದರೆ, ಒಂದು ಸತ್ಯ ಏನೆಂದರೆ, RTE act ಪ್ರಕಾರ ನಾವು LKG ಮತ್ತು ಪ್ರಾಥಮಿಕ ಶಾಲೆಗೆ ನಾವೇ ಹಣ ಕೊಟ್ಟು ಸರ್ಕಾರಿ ಶಾಲೆಯಿಂದ ಖಾಸಗಿ ಶಾಲೆಗೆ ನಾವು ಸೇರಿಸುತ್ತಿದ್ದೇವೆ. ಅದು ಒಂದು ಕಾರಣದಲ್ಲಿ ನಮ್ಮ ಸರ್ಕಾರಿ ಶಾಲೆಗೆ admissionಗೆ ಸಂಖ್ಯೆ ಕಡಿಮೆಯಾಗುವುದಕ್ಕೆ ಒಂದು ಕಾರಣವೆಂದು ನಾವು ಸಹ ಭಾವಿಸಿಕೊಂಡಿದ್ದೇವೆ. ಏಕೆಂದರೆ, ಈಗಾಗಲೇ ಸುಮಾರು 4 ಲಕ್ಷ ಜನ ಮಕ್ಕಳು ಸರ್ಕಾರಿ ಶಾಲೆಗೆ ಸೇರುವಂಥ ಮಕ್ಕಳನ್ನು ನಾವು ಖಾಸಗಿ ಶಾಲೆಗಳಿಗೆ at the cost of the Government we are sending. ಈಗಾಗಲೇ ಸುಮಾರು 430 ಕೋಟಿ ರೂಪಾಯಿಯನ್ನು ಒಟ್ಟು 8ನೇ ತರಗತಿಯವರೆಗೆ ಈಗ ಸೌಲಭ್ಯವಿದೆ. ಈಗಿನ್ನೂ 4–5 ವರ್ಷವಿದೆ. ಹೆಚ್ಚು ಕಡಿಮೆ 1,000 ಕೋಟಿ ರೂಪಾಯಿಯಷ್ಟು ಸರ್ಕಾರ ಖಾಸಗಿ ಶಾಲೆಗೆ ಕಟ್ಟಿ ನಮ್ಮ ಶಾಲೆಗೆ ಬರುವಂಥ ಮಕ್ಕಳನ್ನು ನಾವು ಖಾಸಗಿ ಶಾಲೆಗೆ ಕಳುಹಿಸುತ್ತಿದ್ದೇವೆ. ಅದು ಸಹ ಒಂದು ಕಾರಣವಾಗುತ್ತದೆಂದು ನಾವು ಭಾವಿಸಿಕೊಂಡಿದ್ದೇವೆ. ಅದರ ಬಗ್ಗೆ ಇನ್ನೂ ಪರಿಪೂರ್ಣವಾಗಿ ನಾವು ಅಧ್ಯಯನ ಮಾಡಿಕೊಳ್ಳುವುದಕ್ಕೆ ಹೋಗಿಲ್ಲ. That is also one of the grounds ಎಂದು ನಾವು ಭಾವಿಸಿಕೊಂಡಿದ್ದೇವೆ.

ಶ್ರೀ ಸಿ.ಟಿ. ರವಿ: ಈ onlineನ್ನು ಕೇಂದ್ರಿಕೃತವಾಗಿ ರಾಜ್ಯಕ್ಕೆ centralized ಮಾಡಿದ್ದೀರಿ, ಅವರಿಗೆ distance ಬಗ್ಗೆ ಅರಿವಿರುವುದಿಲ್ಲ. ಹಾಗಾಗಿ, ನೀವು ಜಿಲ್ಲಾ ಮಟ್ಟದಲ್ಲಿ ಏಕೆ online ಪ್ರಕ್ರಿಯೆಯನ್ನು ಮಾಡಿ seat

ಹಂಚಿಕೆ ಮಾಡಬಾರದು? ನಿಮಗೆ ಈಗ ರಾಜ್ಯದಲ್ಲಿ ರಾಜ್ಯದ ಮಟ್ಟದಲ್ಲಿ seat ಕೊಡುವುದಿಲ್ಲ. ನೀವು ಆಯಾ ಪ್ರದೇಶಕ್ಕೆ seat ಕೊಡುವುದು. ಈ onlineನ್ನು ಏಕೆ ರಾಜ್ಯಮಟ್ಟದಲ್ಲಿ ಮಾಡುತ್ತೀರಿ?

ಅಧ್ಯಕ್ಷರು: ರವಿಯವರೆ, ಆ ಪ್ರಶ್ನೆಯನ್ನು ನೀವು ಎಲ್ಲಿ ಕೇಳಿದ್ದೀರಿ?

ಶ್ರೀ ಸಿ.ಟಿ. ರವಿ: ಇದು ಉಪಪ್ರಶ್ನೆ. addition.

ಶ್ರೀ ಕಿಮ್ಮನೆ ರತ್ನಾಕರ: He is right sir, ಏನಾಗಿದೆಯೆಂದರೆ, ನಾವು ಇಲಾಖೆಯವರು Central Governmentನಿಂದ ನೇಮಕವಾಗಿರುವಂಥ ಒಂದು ಏಜೆನ್ಸಿ ಏನಿದೆ, ಅದಕ್ಕೆ ಶಿಫಾರಸ್ಸು ಪತ್ರಗಳನ್ನು, recommendations, influenceಗಳನ್ನು avoid ಮಾಡಬೇಕು ಎಂದು ನಾವು ಹೇಳಿದ್ದೆವು, ಎನ್ನುವ ಕಾರಣಕ್ಕಾಗಿ onlineನಲ್ಲಿ ಮಾಡಿ, on merit synchronize ಮಾಡಿ ಒಂದೇ ದಿನ ಇಡೀ stateದ್ದನ್ನು ನಾವು announce ಮಾಡಿದ್ದೇವೆ. ಅದರೊಳಗೆ ಎಲ್ಲವನ್ನು feed ಮಾಡಿ ಮಾಡಿರುವುದು. ಅದರಲ್ಲಿ ಉಳಿದಿರುವಂಥದ್ದು, ಯಾವ್ಯಾವುದು reject ಆಗಿದೆ, ಯಾರ್ಯಾರಿಗೆ ಸಿಕ್ಕಿಲ್ಲ ಅದನ್ನು ನಾವು ನಂತರದಲ್ಲಿ ಎರಡನೇ ಮತ್ತು ಮೂರನೇ ಹಂತದಲ್ಲಿ ಇತ್ಯರ್ಥ ಮಾಡಿದ್ದೇವೆ. ಆ ರೀತಿ ಆಗಿಯೂ ಸಹ ಕೆಲವು ಇತ್ಯರ್ಥವಾಗದೇ ಇರುವುದನ್ನು BEO ಗಳಿಗೆ delegate ಮಾಡಿ ಲಾಟರಿ ಮೂಲಕ ಅಥವಾ ನಿಮ್ಮ ಹಂತದಲ್ಲಿ ಅದನ್ನು ಬಗೆಹರಿಸಿ ಎನ್ನುವ ಮಾತನ್ನು ಹೇಳಿದ್ದೇವೆ. synchronize ಮಾಡುವ ಉದ್ದೇಶ in order to avoid the corruption and influence, ಈ ವ್ಯವಸ್ಥೆಯನ್ನು ಮಾಡಿರುವುದು. ಒಂದೇ ದಿನ anounance ಮಾಡಿ ಒಂದೇ ಯೂನಿಟ್‌ನಲ್ಲೇ ಮಾಡಿರುವುದು.

ಅಧ್ಯಕ್ಷರು: ಆಯಿತು, ಬಸವರಾಜ ಬೊಮ್ಮಾಯಿ.